# ನಿರ್ಣಯಗಳು ಅನುಷ್ಠಾನಗೊಳ್ಳಲಿ!

ಎಪ್ಪತ್ತೇಳನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರಸ್ತಾಪವಾದ ಕೆಲ ವಿಷಯಗಳು ಕನ್ನಡಿಗರಲ್ಲಿ ಆತಂಕಗಳನ್ನು ಹುಟ್ಟುಹಾಕಿವೆ. ಪ್ರತಿ ಸಮ್ಮೇಳನದಲ್ಲೂ ಕನ್ನಡಕ್ಕೆ ಎದುರಾಗಿರುವ ಅಪಾಯಗಳನ್ನು ಕುರಿತು ಸಾಹಿತಿಗಳು, ಕನ್ನಡದ ಹಿರಿಯರು ಪ್ರಸ್ತಾಪಿಸಿ ಅವನ್ನು ಎದುರಿಸುವ ಮಾರ್ಗೋಪಾಯಗಳನ್ನು ಸೂಚಿಸಿ ಕನ್ನಡಿಗರನ್ನು ಎಚ್ಚರಿಸುತ್ತಾರೆ. ಬೆಂಗಳೂರು ಸಮ್ಮೇಳನವೂ ಇದಕ್ಕೆ ಹೊರತಾಗಿರಲಿಲ್ಲ. ಸಮ್ಮೇಳನಾಧ್ಯಕ್ಷ ಪ್ರೊ. ಜಿ. ವೆಂಕಟಸುಬ್ಬಯ್ಯ ಅವರು ಒಂದು ಹೆಜ್ಜೆ ಮುಂದೆ ಹೋಗಿ 'ಬೆಂಗಳೂರು ಮಹಾನಗರ ಕನ್ನಡಿಗರ ಕೈತಪ್ಪಿ ಹೋಗದಂತೆ ನೋಡಿಕೊಳ್ಳಿ' ಎಂಬ ಮಾತು ಹೇಳಿದ್ದಾರೆ. ಈ ಮಾತೂ ಹೊಸದಲ್ಲ. ಆದರೆ ಈಗ ಅದನ್ನು ಉಪೇಕ್ಷಿಸುವಂತಿಲ್ಲ ಎನ್ನುವಂತಹ ವಾತಾವರಣ ನಿರ್ಮಾಣವಾಗಿದೆ. ಬೆಂಗಳೂರಿನಲ್ಲಿ ಕನ್ನಡಿಗರ ಸಂಖ್ಯೆ ಕ್ಷೀಣಿಸುತ್ತಲೇ ಇದೆ. ಮಾಹಿತಿ ತಂತ್ರಜ್ಞಾನದ ಕೇಂದ್ರವಾಗಿ ಬೆಂಗಳೂರು ವಿಶ್ವದ ಗಮನ ಸೆಳೆದ ನಂತರ ಹಲವಾರು ಬದಲಾವಣೆಗಳಾಗಿವೆ. ಈ ಹಿನ್ನೆಲೆಯಲ್ಲಿ ಸಮ್ಮೇಳನಾಧ್ಯಕರ ಮಾತನ್ನು ಗಂಭೀರ ವಿಷಯ ಎಂದೇ ಪರಿಗಣಿಸಬೇಕು.

ಬೆಂಗಳೂರು ನಗರ ಮಾತ್ರವಲ್ಲ ಇಡೀ ರಾಜ್ಯದಲ್ಲಿ ಕನ್ನಡ ಸೊರಗುತ್ತಿದೆ. ಕನ್ನಡ ಬಳಸುವ ಕ್ಷೇತ್ರಗಳು ಕಡಿಮೆಯಾಗುತ್ತಿವೆ. ಬೆಂಗಳೂರು ಸೇರಿದಂತೆ ರಾಜ್ಯಕ್ಕೆ ವಲಸೆ ಬರುವವರ ಸಂಖ್ಯೆ ಹೆಚ್ಚುತ್ತಿದೆ. ಹೀಗೆ ಬಂದವರು ತಮ್ಮ ತಮ್ಮ ಭಾಷೆಗಳಲ್ಲಿ ವ್ಯವಹರಿಸುತ್ತಾರೆ. ಮಕ್ಕಳಿಗೆ ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ಕೊಡಿಸುತ್ತಾರೆ. ಕನ್ನಡ ಕಲಿಯದಿದ್ದರೂ ಇಲ್ಲಿ ಜೀವನ ಮಾಡಬಹುದು ಎಂಬ ಭಾವನೆ ಅವರಲ್ಲಿದೆ. ಈ ಧೋರಣೆ ಕನ್ನಡದ ಬೆಳವಣಿಗೆಗೆ ದೊಡ್ಡ ಅಡ್ಡಿಯಾಗಿದೆ. ಮುಂದೊಂದು ದಿನ ಇಂತಹ ಜನರೇ ಬೆಂಗಳೂರು ಕೇಂದ್ರಾಡಳಿತ ಪ್ರದೇಶವಾಗಲಿ ಎನ್ನಬಹುದು. ಅದಕ್ಕೆ ಅವಕಾಶ ಕೊಡಬಾರದು. ಹಾಗಾದರೆ ಏನು ಮಾಡಬೇಕು? ಅದನ್ನು ಸಮ್ಮೇಳನಾಧ್ಯಕ್ಷರೇ ಹೇಳಿದ್ದಾರೆ. ಅವರ ಸಲಹೆಗಳನ್ನು ಸರ್ಕಾರ, ಕನ್ನಡಿಗರು ಹಾಗೂ ಕನ್ನಡಪರ ಸಂಘಟನೆಗಳು ಎಚ್ಚರಿಕೆ ಗಂಟೆ ಎಂದು ಭಾವಿಸಿ ಕಾರ್ಯೋನ್ಮುಖವಾಗಬೇಕು.

ಬೆಂಗಳೂರು ಸಾಹಿತ್ಯ ಸಮ್ಮೇಳನದಲ್ಲಿ ಯಾವ ನಿರ್ಣಯಗಳನ್ನು ಅಂಗೀಕರಿಸುವುದಿಲ್ಲ ಎಂದು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಹೇಳಿದ್ದರು. ಆದರೆ ಒಂಬತ್ತು ನಿರ್ಣಯಗಳನ್ನು ಅಂಗೀಕರಿಸಲಾಯಿತು. ಇವು ಅನುಷ್ಠಾನಕ್ಕೆ ಬರಬೇಕು. ಇಲ್ಲವಾದರೆ ಅವುಗಳಿಗೆ ಅರ್ಥವಿಲ್ಲ. ಸರ್ಕಾರ ಸಮ್ಮೇಳನ ನಡೆಸಲು ಹಣ ಕೊಟ್ಟರೆ ಸಾಲದು. ಸಮ್ಮೇಳನಗಳಲ್ಲಿ ಚರ್ಚೆಯಾಗುವ ವಿಷಯಗಳನ್ನು, ಅಂಗೀಕರಿಸುವ ನಿರ್ಣಯಗಳನ್ನು ಅನುಷ್ಠಾನಕ್ಕೆ ತರುವ ಪ್ರಯತ್ನ ಮಾಡಬೇಕು. ಕನ್ನಡ, ಕನ್ನಡಿಗ ಮತ್ತು ಕರ್ನಾಟಕದ ಅಸ್ತಿತ್ವಕ್ಕೆ ಅಡ್ಡಿಯಾಗಿರುವ ಬೆಳವಣಿಗೆಗಳನ್ನು ನಿಯಂತ್ರಿಸಬೇಕು. ಇಲ್ಲವಾದರೆ ಸಮ್ಮೇಳನಗಳಿಗೂ ಅರ್ಥವಿಲ್ಲ. ಅಲ್ಲಿ ಅಂಗೀಕರಿಸುವ ನಿರ್ಣಯಗಳಿಗೆ ಬೆಲೆಯೂ ಬರುವುದಿಲ್ಲ.

ರಾಜಧಾನಿ ಬೆಂಗಳೂರು ಮತ್ತು ಗಡಿ ಜಿಲ್ಲೆಗಳಲ್ಲಿ ಕನ್ನಡದ ಪರಿಸ್ಥಿತಿ ಗಂಭೀರವಾಗಿದೆ. ಗಡಿ ಭಾಗದ ಕನ್ನಡ ಶಾಲೆಗಳನ್ನು ಅಭಿವೃದ್ಧಿಪಡಿಸಬೇಕು ಎಂಬ ಒತ್ತಾಯ ಹಲವಾರು ವರ್ಷಗಳಿಂದ ಕೇಳಿ ಬರುತ್ತಿದೆ. ದುರದೃಷ್ಟದ ಸಂಗತಿ ಎಂದರೆ ಗಡಿ ಭಾಗದ ಅನೇಕ ಶಾಲೆಗಳಿಗೆ ಸರಿಯಾದ ಕಟ್ಟಡಗಳಿಲ್ಲ. ಅಗತ್ಯವಿರುವಷ್ಟು ಶಿಕ್ಷಕರಿಲ್ಲ. ಜಿಲ್ಲಾ ಆಡಳಿತಗಳು ಗಡಿ ಭಾಗದ ಜನರಿಗೆ ಅಗತ್ಯ ಮೂಲಭೂತ ಸೌಕರ್ಯ ಒದಗಿಸುವ ವಿಷಯದಲ್ಲಿ ಉದಾಸೀನದ ಧೋರಣೆ ತಾಳಿವೆ. ಗಡಿ ಪ್ರದೇಶದ ಅಭಿವೃದ್ಧಿಗಾಗಿ ಸರ್ಕಾರ ಪ್ರಾಧಿಕಾರವೊಂದನ್ನು ರಚಿಸಿದೆ. ಅದು ಹೆಚ್ಚು ಕ್ರಿಯಾಶೀಲವಾಗಬೇಕು. ಗಡಿ ಪ್ರದೇಶದ ಅಭಿವೃದ್ಧಿ ಬಗ್ಗೆ ಮಾತಿನ ಕಾಳಜಿ ತೋರಿಸಿದರೆ ಸಾಲದು.

ನಮ್ಮ ಚಾಮರಾಜನಗರ ಜಿಲ್ಲೆಯನ್ನೇ ತೆಗೆದುಕೊಳ್ಳಿ. ಚಾಮರಾಜನಗರಕ್ಕೆ ಹೋದರೆ ಅಧಿಕಾರ ಹೋಗುತ್ತದೆ ಎಂದು ಹೆದರಿ ಅನೇಕ ಮುಖ್ಯಮಂತ್ರಿಗಳು ಅತ್ತ ತಲೆ ಹಾಕುವುದಿಲ್ಲ. ರಾಜ್ಯದ ಜವಾಬ್ದಾರಿ ಹೊತ್ತವರು ಒಂದು ಜಿಲ್ಲಾ ಕೇಂದ್ರವನ್ನು ಹೀಗೆ ಉಪೇಕ್ಷಿಸಬಹುದೇ? ಮುಖ್ಯಮಂತ್ರಿಯವರಷ್ಟೇ ಅಲ್ಲ ಸಾಹಿತ್ಯ ಪರಿಷತ್ತೂ ಹಾಗೇ ವರ್ತಿಸಿದೆ. ಅಲ್ಲಿ ಸಾಹಿತ್ಯ ಸಮ್ಮೇಳನ ನಡೆಸಬೇಕು ಎಂದು ಪರಿಷತ್ತಿನ ಕಾರ್ಯಕಾರಿ ಸಮಿತಿಗೆ ಅನ್ನಿಸಿಯೇ ಇಲ್ಲ. ಗಡಿ ಜಿಲ್ಲೆಗಳಿಗೆ ಕನ್ನಡದ ಬೇಲಿ ಹಾಕಬೇಕು ಎಂದು ನಮ್ಮ ಕೆಲವು ಸಾಹಿತಿಗಳು ಆಕರ್ಷಕ ಮಾತುಗಳಲ್ಲಿ ಹೇಳುತ್ತಾರೆ. ಆದರೆ ವಾಸ್ತವ ಬೇರೆಯೇ ಇದೆ. ಇದು ಕನ್ನಡಿಗರ ದುರದೃಷ್ಟ. ಅನ್ಯ ಭಾಷಿಕರು ಹೆಚ್ಚಿನ ಸಂಖ್ಯೆಯಲ್ಲಿರುವ ಬೆಂಗಳೂರು ಮಹಾನಗರ ಸೇರಿದಂತೆ ಗಡಿ ಜಿಲ್ಲೆಗಳಲ್ಲಿ ಕನ್ನಡದ ಪರಿಸರ ನಿರ್ಮಾಣ ಮಾಡುವ ಕೆಲಸಕ್ಕೆ ಆದ್ಯತೆ ಕೊಡಬೇಕು. ಕನ್ನಡ ಬೆಳೆಸುತ್ತೇವೆ ಎಂಬ ಮಾತುಗಳನ್ನು ಮತ್ತೆ ಮತ್ತೆ ಆಡುವುದನ್ನು ನಿಲ್ಲಿಸಿ ಕೆಲಸ ಆರಂಭಿಸಬೇಕು. ಅದು ಸಾಧ್ಯವಾದರೆ ಕನ್ನಡ ಬೆಳೆದೀತು. ಕರ್ನಾಟಕ ಉಳಿದೀತು.

■ ಪ್ರೇಮಕುಮಾರ್ ಹರಿಯಬ್ಬೆ

ಬೆಂಗಳೂರು ಸಾಹಿತ್ಯ ಸಮ್ಮೇಳನದಲ್ಲಿ ಯಾವ ನಿರ್ಣಯಗಳನ್ನು ಅಂಗೀಕರಿಸುವುದಿಲ್ಲ ಎಂದು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಹೇಳಿದ್ದರು. ಆದರೆ ಒಂಬತ್ತು ನಿರ್ಣಯಗಳನ್ನು ಅಂಗೀಕರಿಸಲಾಯಿತು. ಇವು ಅನುಷ್ಠಾನಕ್ಕೆ ಬರಬೇಕು. ಇಲ್ಲವಾದರೆ ಅವುಗಳಿಗೆ ಅರ್ಥವಿಲ್ಲ. ಸರ್ಕಾರ ಸಮ್ಮೇಳನ ನಡೆಸಲು ಹಣ ಕೊಟ್ಟರೆ ಸಾಲದು. ಸಮ್ಮೇಳನಗಳಲ್ಲಿ ಚರ್ಚೆಯಾಗುವ ವಿಷಯಗಳನ್ನು, ಅಂಗೀಕರಿಸುವ ನಿರ್ಣಯಗಳನ್ನು ಅನುಷ್ಠಾನಕ್ಕೆ ತರುವ ಪ್ರಯತ್ನ ಮಾಡಬೇಕು.

